ಪೋಲೀಸ್ ಕೇಂದ್ರ ಕಛೇರಿಯ ನೌಕರರ ಬಗ್ಗೆ

೧೦೦೨. ಶ್ರೀ ಬಿ. ಲಕ್ಕಪ್ಪ (ಚಿಕ್ಕನಾಯಕನಹಳ್ಳಿ).—ಮಾನ್ಯ ಗೃಹ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಪೋಲೀಸ್ ಕೇಂದ್ರ ಕಚೇರಿಯಲ್ಲಿ ೫ ರಿಂದ ೨೦ ವರ್ಷ ಸೇವೆ ಸಲ್ಲಿಸಿದ ನೌಕರರ ಸಂಖ್ಯೆ ಎಷ್ಟು ?

ಆ) ಅವರನ್ನು ಈ ರೀತಿ ಒಂದೇ ಕಡೆ ಇಟ್ಟುಕೊಳ್ಳಲು ಕಾರಣವೇನು ?

ಶ್ರೀ ಆರ್. ಎಲ್. ಜಾಲಪ್ಪ (ಗೃಹ ಮಂತ್ರಿಗಳು).—

ಅ) ಪೋಲೀಸ್ ಕೇಂದ್ರ ಕಚೇರಿಯಲ್ಲಿ ೫ ರಿಂದ ೨೦ ವರ್ಷ ಸೇವೆ ಸಲ್ಲಿಸಿರುವ ನೌಕರರ ಸಂಖ್ಯೆ , ೧೧೪.

ಆ) ಗ್ರೂಪ್ ಡಿ ಮತ್ತು ಎರಡನೇ ದರ್ಜೆ ಸಹಾಯಕರನ್ನು ಬೇರೆ ಕಡೆಗೆ ಸಾಧಾರಣವಾಗಿ ವರ್ಗ ಮಾಡುವುದಿಲ್ಲ.

ಕೇಂದ್ರ ಕಚೇರಿ, ನೀತಿಗೆ ಸಂಬಂಧಿಸಿದ ವಿಷಯಗಳನ್ನು ನಿರ್ವಹಿಸುತ್ತದೆ. ಅನುಭವವುಳ್ಳ ಸಿಬ್ಬಂದಿಯನ್ನು ಕಚೇರಿ ಕೆಲಸವನ್ನು ಸುಗಮವಾಗಿ ನಿರ್ವಹಿಸಿಕೊಂಡು ಹೋಗಲು ಅಲ್ಲೇ ಇರಿಸಲಾಗಿದೆ.

ಕರ್ನಾಟಕ ರಾಜ್ಯದ ಪೋಲೀಸರಿಗೆ ವಸತಿಯ ಬಗ್ಗೆ

೧೦೦೪. ಶ್ರೀ ಬಿ. ಲಕ್ಕಪ್ಪ (ಚಿಕ್ಕನಾಯಕನಹಳ್ಳಿ).—ಮಾನ್ಯ ಗೃಹ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕರ್ನಾಟಕ ರಾಜ್ಯ ಕಾಯ್ದಿಟ್ಟ ಪೋಲೀಸ್ ಸಿಬ್ಬಂದಿಗೆ ಹುಡ್ಕೋ ನೆರವಿನಿಂದ ನಿರ್ಮಿಸಿದ ೪೮೦ ವಸತಿ ಗೃಹಗಳನ್ನು ೧೯೮೬ನೇ ನವೆಂಬರ್‌ನಿಂದ ಜೂನ್ ೧೯೮೭ರ ವರೆಗೆ ಖಾಲಿ ಇಡಲು ಕಾರಣವೇನು ?

ಆ) ಇದರಿಂದಾಗಿ ಸರ್ಕಾರಕ್ಕೆ ಆಗಿರುವ ಹಣಕಾಸಿನ ನಷ್ಟವೆಷ್ಟು ?

ಇ) ಈ ಮನೆಗಳನ್ನು ಯಾವ ದಿನಾಂಕದಂದು ಪೋಲೀಸ್ ಸಿಬ್ಬಂದಿಗೆ ನೀಡಲಾಯಿತು ಹಾಗೂ ಈ ಮನೆಗಳನ್ನು ''ಸಾರ್ಕ್'' ಸಮ್ಮೇಳನದಲ್ಲಿ ರಕ್ಷಣಾ ಪಡೆಯ ಅಧಿಕಾರಿಗಳಿಗೆ ನೀಡಲಾಗಿತ್ತೆ ?

ಶ್ರೀ ಆರ್, ಎಲ್. ಜಾಲಪ್ಪ (ಗೃಹ ಮಂತ್ರಿಗಳು).—

ಅ) ವಸತಿ ಗೃಹಗಳಿಗೆ ಒಳಗಿನ ಮತ್ತು ಹೊರಗಿನ ವಿದ್ಯುಚ್ಛಕ್ತಿಯನ್ನು ಒದಗಿಸಿರಲಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ೧. ೨೪೦ ವಸತಿ ಗೃಹಗಳನ್ನು ದಿನಾಂಕ : ೨೨-೫-೮೭ರಂದು ಪೋಲೀಸ್ ಸಿಬ್ಬಂದಿಗೆ ನೀಡಲಾಯಿತು.

೨. ೨೪೦ ವಸತಿ ಗೃಹಗಳನ್ನು ದಿನಾಂಕ : ೨೫-೫-೮೭ ರಂದು ಪೋಲೀಸ್ ಸಿಬ್ಬಂದಿಗೆ ನೀಡಲಾಯಿತು.

೩. ದಿನಾಂಕ : ೬-೧೧-೧೯೮೬ ರಿಂದ ದಿನಾಂಕ ೧೨-೧೧-೧೯೮೬ರ ವರೆಗೆ ತಾತ್ಕಾಲಿಕವಾಗಿ ಕೇಂದ್ರ ವಿಸಾಸಲು ಪೋಲೀಸ್ ಪಡೆಯ ಸಿಬ್ಬಂದಿ ವರ್ಗದವರಿಗೆ ''ಸಾರ್ಕ್'' ಸಮ್ಮೇಳನದ ಸಮಯದಲ್ಲಿ ಕರ್ನಾಟಕ ಗೃಹ ಮಂಡಳಿಯ ವರ ಮಂಜಾಂತರ ೨೪೦ ವಸತಿ ಗೃಹಗಳನ್ನು ಮಾತ್ರ ಕೊಡಲಾಗಿತ್ತು.